**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಸಿ. ಸಿ. ನಂಬರಃ 426/2025</u>**

**<u>ಫಿರ್ಯಾದುದಾರರು:</u>**

ಶ್ರೀ ಪರಶುರಾಮ ತಂದೆ ಲಕ್ಷ್ಮಣ ಭೋವಿ,
ಪ್ರಾಯ: 28 ವರ್ಷ,ಉ: ಕಟ್ಟಡ ಗುತ್ತಿಗೆದಾರ,
ಸಾ: ನ್ಯಾಸರ್ಗಿ ಪ್ಲಾಟ, ತಾ:ಮುಂಡಗೋಡ, ಉ.ಕ.

**– ವಿರುದ್ಧ –**

**<u>ಆರೋಪಿತ :</u>**

ಶ್ರೀ ಪ್ರಶಾಂತ ಹಲಕುರ್ಕಿ,
ಪ್ರಾಯ: 39 ವರ್ಷ,ಸಾ: ಮನೆ ನಂ.3–191/2 ಎ,
ನಂದೀಶ್ವರ ನಗರ, ತಾ: ಮುಂಡಗೋಡ,
ಜಿಲ್ಲಾ: ಉತ್ತರ ಕನ್ನಡ.

**<u>ಆಪಾದನೆ</u>**

ಆರೋಪಿತರಾದ ನೀವು ಪಿರ್ಯಾದುದಾರರಿಗೆ ಪರಿಚಯಸ್ಥರಿದ್ದು, ನಿಮ್ಮಗೆ ಆರ್ಥಿಕ ತೊಡಕಾಗಿ ಹಣದ ಅಡಚಣೆ ಬಂದಿದ್ದರಿಂದ ಫಿರ್ಯಾದಿದಾರನಿಂದ 2024 ನೇ ಇಸ್ವಿ ಮಾರ್ಚ ತಿಂಗಳ ಮೊದಲನೇ ವಾರದಲ್ಲಿ ರೂ.2,50,000/–ಗಳನ್ನು ಬೇಡಿದ್ದು, ಮತ್ತು ಅದನ್ನು 15 ದಿನಗಳ ಒಳಗಾಗಿ ಹಿಂತಿರುಗಿಸಿ ಕೊಡುವುದಾಗಿ ಒಪ್ಪಿದ್ದು, ನಂತರ ನಿಮ್ಮ ಮೇಲಿನ ನಂಬಿಕೆಯಿಂದ ಫಿರ್ಯಾದಿದಾರ ರೂ.2,00,000/–ಗಳನ್ನು ಸಾಲವಾಗಿ ನೀಡಿರುತ್ತಾರೆ. ಆದರೆ ನೀವು ಮಾತಿನಂತೆ ನಡೆದುಕೊಳ್ಳದೆ ಇಂದು ನಾಳೆ ಅಂತಾ ವಿಳಂಬ ಮಾಡುತ್ತಾ ಬಂದಿರುತ್ತಿರಿ. ತದನಂತರ ನೀವು ನಿಮ್ಮ ಖಾತೆ ಇರುವ ಎಸ್.ಬಿ.ಐ ಬ್ಯಾಂಕ್, ಮುಂಡಗೋಡ ಶಾಖೆ ಚೆಕ್ಕ ನಂಬರ್ 330508 ದಿನಾಂಕ 28–03–2025 ಎಂದು ನಮೂದಿಸಿ ಒಟ್ಟು ರೂ.2,00,000/–ಗಳ ಮೊತ್ತಕ್ಕೆ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸದ್ರಿ ಚೆಕ್ಕನ್ನು ಅವರ ಖಾತೆ ಇರುವ ಎಸ್.ಬಿ.ಐ ಬ್ಯಾಂಕ್, ಮುಂಡಗೋಡ ಶಾಖೆಗೆ ದಿನಾಂಕ 28–03–2025 ರಂದು ಸದರಿ ಬ್ಯಾಂಕಗೆ

ನಗಧೀಕರಣಕ್ಕಾಗಿ ಹಾಜರ ಪಡಿಸಿದಾಗ, ನೀವು ಹೊಂದಿರುವ ಖಾತೆಯಲ್ಲಿ "INSUFFICIENT FUNDS" ಎಂದು ನಮೂದು ಮಾಡಿ ದಿನಾಂಕ 28-03-2025 ರಂದು ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 16-04-2025 ರಂದು ತಮ್ಮ ವಕೀಲರ ಮೂಲಕ ನೋಟಿಸ್‌ನ್ನು ನಿಮಗೆ ನೀಡಿದ್ದು, ಸದರಿ ನೋಟಿಸ್ಸು ದಿನಾಂಕ 17-04-2025 ರಂದು ಖುದ್ದು ಜಾರಿಯಾಗಿದ್ದರೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 10-02-2026

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ.